
# ಪರಸ್ಪರ ಸಹಾಯ



ಕಲೆ: ಡಾ. ಶ್ರೀಕಂಠ

ಶ್ರೀಮತಿ ಹೇಮಾ ಮಾಧವರಾವ್

**ಈ ಜೀವನ ಪರಸ್ಪರ ಅವಲಂಬನೆಯಿಂದ ಸಾಗುವಂತಹುದು ಎಂಬ ನೀತಿಯನ್ನು ಪತ್ರಿಕೋದ್ಯಮಿಗಳಾದ ಶ್ರೀಮತಿ ಹೇಮಾ ಮಾಧವರಾವ್ ಅವರು ಕಥೆಯ ಮೂಲಕ ಚಿತ್ರಿಸಿರುವರು.**

ದಸರಾ ಹಬ್ಬವು ಹತ್ತಿರ ಬರುತ್ತಿದ್ದಂತೆ ಹೂವಿನ ಪರಿಮಳವೂ ಅಲ್ಲಲ್ಲಿ ಸೂಸುತ್ತಿದೆ. ದಸರಾಕ್ಕೆ ಮೆರಗು ಕೊಡುವ ಹೂವಿನ ಸ್ಪರ್ಧೆಗಳೂ ಆರಂಭವಾಗಿವೆ. ಮನೆಯ ಹತ್ತಿರ ದಲ್ಲಿಯೇ ಇರುವ ಸುಂದರ ಉದ್ಯಾನವನ ಪ್ರಥಮ ಬಹುಮಾನ ಪಡೆಯುತ್ತಲೇ ಬಂದಿದೆ. ಆ ಸುಂದರ ಉದ್ಯಾನವನದ ಸೌಂದರ್ಯ ಸವಿಯಲು ಹೋಗುವಂತೆ ಆ ಮನೆಯ ಯಜ ಮಾನನ ಮನಸ್ಸು ಬಯಸುತ್ತಿದೆ. ಆದರೆ ಏನು ಮಾಡುವುದು? ವಯಸ್ಸಿನಿಂದಾಗಿ ಅವನ ದೇಹ ಸ್ಥಿತಿ ಮೊದಲಿನಂತಿಲ್ಲ. ಕಣ್ಣು ದುರ್ಬಲವಾಗುತ್ತಿದೆ, ಕಾಲಿನ ಶಕ್ತಿ ಕುಂಠಿತವಾಗಿದೆ. ಆದರೆ ಜೀವನ ಉತ್ಸಾಹ ಇನ್ನೂ ಹಾಗೆಯೇ ಇದೆ.

ಹಲವು ವರ್ಷಗಳ ಹಿಂದೆ ಅವನು ಪ್ರತಿದಿನ ಸಂಜೆ ತನ್ನ ಮಕ್ಕಳನ್ನು ಕರೆದುಕೊಂಡು ಆ ಉದ್ಯಾನವನಕ್ಕೆ ಹೋಗುತ್ತಿದ್ದ. ಅನಂತರ ತನ್ನ ಮೊಮ್ಮಕ್ಕಳನ್ನೂ ಕರೆದುಕೊಂಡು ಹೋಗ ತೊಡಗಿದ. ಹೂವಿನ ಸಮಾನ ಸುಂದರ ಪುಟಾಣಿ ಮುಗ್ಧ ಮಕ್ಕಳು ಹಾಗೂ ಅಂದದ ಹೂವಿನ ಜೊತೆ ಸಂತೋಷದಿಂದ ಮೈಮರೆಯುತ್ತಿದ್ದ. ಮಕ್ಕಳು, ಮೊಮ್ಮಕ್ಕಳು ತಮ್ಮ ತಮ್ಮ ಉದ್ಯೋಗ ನಿಮಿತ್ತ ದೂರದಲ್ಲಿರುವುದರಿಂದ ಅವನು ಈಗ ಒಬ್ಬಂಟಿಗನಾಗಿದ್ದಾನೆ. ಮೊದಲಿನಂತೆ ಹೂದೋಟಕ್ಕೆ ಪ್ರತಿದಿನ ಹೋಗಲು ಆಗುತ್ತಿಲ್ಲ.

ಆದರೆ ಹೂದೋಟದ ಬಣ್ಣ ಬಣ್ಣದ ಅಂದಚೆಂದದ ಹೂವುಗಳು ಅವನ ಮನಃಪಟಲದ ಮೇಲೆ ಮೇಲಿಂದ ಮೇಲೆ ಇನ್ನೂ ಕಂಡುಬರುತ್ತಿದೆ. ಪುಷ್ಪ ಪರಿಮಳ ಅವನ ಕಾಲಿಗೆ ರೆಕ್ಕೆ ಮೂಡಿಸಿವೆ. ಇದರಿಂದಾಗಿ ಅವನು ಬೇಗ ಬೇಗನೆ ಮನೆಯಿಂದ ಹೊರಡುತ್ತಾನೆ. ಅವನ ಮನೆಯಿಂದ ನೇರದಾರಿಯಲ್ಲಿ ಹೊರಟರೆ ೫ ನಿಮಿಷಗಳಲ್ಲಿ ಬಸ್ ತಂಗುದಾಣ ಸಿಗುತ್ತದೆ. ಅಲ್ಲಿಂದ ರಸ್ತೆಯನ್ನು ದಾಟಿದರೆ ಎದುರಿಗೆ ಸುಂದರ ಉದ್ಯಾನವನ. ಬಸ್ ತಂಗು ದಾಣದಲ್ಲಿ ಒಂದು ನಿಮಿಷ ವಿರಾಮದಿಂದ ಉಸಿರನ್ನೆಳೆಯುತ್ತಾನೆ. ಅಷ್ಟರಲ್ಲಿ ಪರಿಚಯ ದವರೊಬ್ಬರು ಯಾರಾದರೂ ತನ್ನನ್ನು ಕಂಡು ರಸ್ತೆ ದಾಟಿಸಲು ತನಗೆ ಸಹಾಯ ಮಾಡುತ್ತಾರೆ; ಈ ಹೂದೋಟಕ್ಕೆ ತನ್ನಂತೆ ಹಲವು ರಸಿಕರು ಬರುತ್ತಾರೆ; ಯಾರ ಜೊತೆಯಾದರೂ ಮರಳಿ ಹೋಗುತ್ತೇನೆ, ಎಂದು ಅವನು ಭಾವಿಸಿದ. ಆದರೆ ವಯಸ್ಸು ಅವನನ್ನು ತಡೆಯುತ್ತಿದೆ.

ಎದುರಿಗೆ ಹಸಿರು ಹಾಸಿದಂತಿರುವ ಉದ್ಯಾನವನ, ಅದರ ನಡುವೆ ವಿವಿಧ ಆಕೃತಿಯ ಬಣ್ಣಬಣ್ಣದ ಸುಂದರ ಪುಷ್ಪಗಳು ಅವನನ್ನು ಗುರ್ತಿಸಿ ಸನ್ನೆ ಮಾಡಿ ಕರೆಯುತ್ತಿವೆ. ಕಾಲು ತನ್ನಿಂದ ತಾನೆ ಮುಂದುವರಿಯುತ್ತಿದೆ. ಆದರೆ ಮನಸ್ಸು ಹಿಂಜರಿಯುತ್ತಿದೆ. ಒಬ್ಬನೇ ರಸ್ತೆಯನ್ನು ದಾಟುವ ಧೈರ್ಯವಿಲ್ಲ. ಕಾರು, ಬಸ್ಸು, ಆಟೋರಿಕ್ಷಾಗಳ ಪ್ರವಾಹ ಸತತವಾಗಿ ಸಾಗುತ್ತಿದೆ.

ಅಷ್ಟರಲ್ಲಿ ಹಿಂದಿನಿಂದ ಅವನಿಗೊಂದು ಧ್ವನಿ ಕೇಳಿಸಿತು: 'ರಸ್ತೆಯನ್ನು ಇಬ್ಬರೂ ಜೊತೆಯಲ್ಲೇ ದಾಟೋಣವೆ?' ಈ ಮಾತನ್ನು ಕೇಳಿ 'ಹೂಂ, ಆಗಬಹುದು' ಎಂಬ ಮಾತು ಅವನ ಬಾಯಿಯಿಂದ ತನ್ನಿಂದ ತಾನೆ ಹೊರಟಿತು. ಆತನ ಕೈ ಈ ಮುದುಕನ ಹೆಗಲನ್ನು ಹಿಡಿಯಿತು. ನಿಧಾನವಾಗಿ ಅವರಿಬ್ಬರೂ ರಸ್ತೆಯನ್ನು ದಾಟಿದರು. ಅವರಿಬ್ಬರೂ ಉದ್ಯಾನವನದ ಗೇಟ್ ಬಳಿ ಬಂದು ನಿಂತರು.

ಮುದುಕನು ಆತನಿಗೆ ಧನ್ಯವಾದ ಹೇಳಬೇಕೆನ್ನುವಷ್ಟರಲ್ಲಿ, ಆತನ ಕೃತಜ್ಞತೆಯ ಮಾತು ಕೇಳಿ ಚಕಿತನಾದ.

'ನಾನು ನಿಮಗೆ ಹೇಗೆ ನನ್ನ ಕೃತಜ್ಞತೆಯನ್ನು ಅರ್ಪಿಸಲಿ; ನನ್ನಂಥ ಕುರುಡನಿಗೆ ಸಂತೋಷದಿಂದ ರಸ್ತೆ ದಾಟಲು ಸಹಾಯ ಮಾಡಿದಿರಿ.'

ಕಣ್ಣರಳಿಸಿ ಮುದುಕನು ಆತನ ಕಡೆಗೆ ನೋಡುತ್ತ ನಿಂತನು. ಆತನು ನಿಜವಾಗಿ ಕುರುಡನಿರಬಹುದೆ ಎಂದು ಒಮ್ಮೆ ಸಂದೇಹಿಸಿದ. ಆತನು ನಿಧಾನವಾಗಿ ಮುಂದೆ ಹೊರಟುಹೋದ. ಆದರೆ ಮುದುಕನು ವಿಚಾರ ಮಾಡುತ್ತ ನಿಂತ: 'ಯಾರು ಯಾರಿಗೆ ಸಹಾಯ ಮಾಡಿದರು?'

ಈ ಸಮಾಜ ಪರಸ್ಪರ ಸಹಾಯದಿಂದ ನಡೆಯುವಂತಹುದು. ನಾವು ಇತರರಿಗೆ ಸಹಾಯ ಮಾಡುತ್ತೇವೆಂದು ಹೆಮ್ಮೆ ಪಟ್ಟುಕೊಳ್ಳುತ್ತೇವೆ. ಆದರೆ ನಾವೂ ಇತರರಿಂದ ಅನೇಕ ರೀತಿಯಲ್ಲಿ ಉಪಕೃತರಾಗಿರುತ್ತೇವೆ. ಯಾರೂ ಇತರರ ಸಹಾಯವಿಲ್ಲದೆ ಈ ಸಮಾಜದಲ್ಲಿ ಬಾಳಲಾರರು. ಈ ಅರಿವು ನಮ್ಮ ಅಹಂಕಾರವನ್ನು ತಗ್ಗಿಸುತ್ತದೆ. ಆ ವೃದ್ಧನು ಈ ಘಟನೆಯನ್ನು ಕುರಿತು ಹೀಗೆ ಆಲೋಚಿಸುತ್ತಿರುವಾಗ ಭಗವದ್ಗೀತೆಯ ಈ ಶ್ಲೋಕ ಅವನ ಮನಸ್ಸಿಗೆ ಬಂತು :

**ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ||—**

'ಪರಸ್ಪರ ಪ್ರೀತಿಸಹಾನುಭೂತಿಯ ಮೂಲಕ ಶ್ರೇಯಸ್ಸನ್ನು ಪಡೆಯಿರಿ.'

✳